# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯವರ ಘನ ಅಧ್ಯಕ್ಷತೆಯಲ್ಲಿ ದಿ:06.12.2021 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಭೆಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀಮತಿ.ಸಂಗೀತಾ.ಆರ್ ಸ.ಅ 134. | ಕಾರ್ಯದರ್ಶಿ. |
| 3. | ಶ್ರೀ.ಅಣ್ಣಪ್ಪ | SWM (TI) |
| 4. | ಶ್ರೀ. ಎಲ್. ಚಂದ್ರಶೇಖರ್ | ಕಂ.ಪ |
| 5. | ಶ್ರೀಮತಿ.ಸುಮಿತ್ರ.ಕೆ.ಎಸ್ | ಕಿ.ಅ |
| 6. | ಶ್ರೀಮತಿ.ಸೀಮಾ ಆರ್. | ಕಿ.ಅ.ಪ |
| 7. | ಶ್ರೀ.ರಾಜೇಂದ್ರ ಕು.ಮಾರ್ | ಸಾರ್ವಜನಿಕರು |
| 8. | ಶ್ರೀ.ಕೀರಣ್ ದೀಪ್ | Marshall |
| 9. | ಶ್ರೀನಿವಾಸ್.ಮೂರ್ತಿ | AAP |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ.ಆರ್.ಸಂಗೀತಾ. ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

1. ಸರ್ಕಾರದ ನಡವಳಿಯಂತೆ ಶಾಲಾ ವಿದ್ಯಾರ್ಥಿಗಳ ಪೋಷಕರು/ಶಿಕ್ಷಕರು ಕಡ್ಡಾಯವಾಗಿ ಕೋವಿಡ್-19 ಲಸಿಕೆ ಹಾಕಿಸಿಕೊಳ್ಳಬೇಕಾಗಿರುವುದರಿಂದ ದಿ:04.12.2021 ರಿಂದ ಪ್ರತಿದಿನ 150 ಜನರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಲಸಿಕೆಯನ್ನು ಸಾರ್ವಜನಿಕರು ಪಡೆದುಕೊಳ್ಳುತ್ತಿದ್ದಾರೆ. Covi Shield /Co Vaccine ಗಳನ್ನು ಪ್ರಾಥಮಿಕ ಕೇಂದ್ರದಲ್ಲಿ ನೀಡಲಾಗುತ್ತಿದೆಂದು ಹಾಗೂ Covid Test ಸಹಾ ನಡಸಲಾಗುತ್ತಿದೆಂದು ಡಾ॥ ಮಂಜುನಾಥ್ ರವರು ಸಭೆಗೆ ತಿಳಿಸಿದರು.

2. ಬಿಬಿಎಂಪಿ ಕಟ್ಟಡಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ WPC ಮೇಲೆ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ, ವಾರ್ಡ್ ಕಛೇರಿ ಕಟ್ಟಡ, ಬೆಂಗಳೂರು ಮಾಹಿತಿ ಕೇಂದ್ರ, ಅಂಗನ ವಾಡಿ ಕಟ್ಟಡಗಳ ಮೇಲೆ ನಿಂತಿದ್ದ ನೀರನ್ನು ತೆರವುಗೊಳಿಸಿ ಘನತ್ಯಾಜ್ಯ ವಿಭಾಗದವರಿಂದ ಕಸ ಗುಡಿಸಿ ಎಲೆಗಳನ್ನು ಸಾಗಿಸಿ ಸ್ವಚ್ಛಗೊಳಿಸಲಾಗಿರುತ್ತದೆ.

3. BWSSB ರವರು Man hole ತೆಗೆದ ಕೆಸರು/ಮಣ್ಣನ್ನು ಹಾಗೆಯೇ ಬಿಟ್ಟಿರುತ್ತಾರೆ, ಇದರನ್ನು ತೆರವುಗೊಳಿಸಲು ಶ್ರೀ.ರಾಜೇಂದ್ರ ರವರು (ಸಾರ್ವಜನಿಕರು) ಕೋರಲಾಗಿ ನಮ್ಮಲ್ಲಿ ಅದನ್ನು ತೆರವುಗೊಳಿಸಲು ಅನುದಾನವಿರುವುದಿಲ್ಲವೆಂದು ಸ.ಅ ರವರು ದೂರವಾಣಿ ಮೂಲಕ ಸಭೆಗೆ ತಿಳಿಸಿದರು ಅಧ್ಯಕ್ಷರು ಇದರ ಬಗ್ಗೆ ಕ್ರಮ ಕೈಗೊಳ್ಳಲು BWSSB ಯ ಹಿರಿಯ ಅಧಿಕಾರಿಗಳೊಂದಿಗೆ ಸಮಸ್ಯೆ ಬಗೆ ಹರಿಸಿಕೊಡಬೇಕೆಂದು ಸ.ಅ ಶ್ರೀ. ದೊಡ್ಡವೀರಪ್ಪ ರವರಿಗೆ ಸೂಚಿಸಿದರು.

4. Park ಗಳಲ್ಲಿ ಯಾವುದೇ Security ಇಲ್ಲವೆಂದು ಹಾಗೂ ನಿವಾರ್ಹಣೆ ಮಾಡುತ್ತಿಲ್ಲವೆಂದು, ದೀಪಗಳು ಮತ್ತು ಸ್ವಚ್ಛವಾಗಿಟ್ಟುಕೊಳ್ಳಲು ಇದರ ಬಗ್ಗೆ ಗಮನ ಹರಿಸಲು ಶ್ರೀ.ರಾಜೇಂದ್ರ ರವರು (ಸಾರ್ವಜನಿಕರು) ಕೋರಲಾಗಿ ಅಧ್ಯಕ್ಷರು ಇದರ ಬಗ್ಗೆ ಕ್ರಮ ಕೈಗೊಳ್ಳಲು ತೋಟಗಾರಿಕೆ ವಿಭಾಗದ ಹಿರಿಯ ಅಧಿಕಾರಿಗಳೊಂದಿಗೆ ಸಮಸ್ಯೆ ಬಗೆ ಹರಿಸಿಕೊಡಬೇಕೆಂದು ಕಾರ್ಯದರ್ಶಿಯವರಿಗೆ ರವರಿಗೆ ಸೂಚಿಸಿದರು.

5. ವೃಷಭಾವತಿ ನಾಲೆಯ ತಡೆಗೋಡೆಗಳ ಬಳಿ ರಸ್ತೆಯ ಚರಂಡಿಗಳಿಗೆ ಹಿಮ್ಮುಖವಾಗಿ ನೀರು ಬರದಂತೆ ತಡೆಹಿಡಿಯಲು ಆರ್.ಸಿ.ಸಿ. Bend Pipe ಗಳನು ಅಳವಡಿಸಿ ಸಮಸ್ಯೆ ಬಗೆ ಹರಿಸಿಕೊಡಬೇಕೆಂದು ಶ್ರೀ.ರಾಜೇಂದ್ರ ರವರು (ಸಾರ್ವಜನಿಕರು) ಕೋರಲಾಗಿ ಅಧ್ಯಕ್ಷರು ಇದರ ಬಗ್ಗೆ ಕ್ರಮ ಕೈಗೊಳ್ಳಲು ಮಳೆ ನೀರುಗಾಲುವೆ ಸ.ಅ ರವರಿಗೆ ವಿಭಾಗದ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆ ಹರಿಸಿಕೊಡಬೇಕೆಂದು SWD ಸ.ಅ ಶ್ರೀಮತಿ ಇಂದ್ರಾಣಿ ರವರಿಗೆ ದೂರವಾಣಿ ಮೂಲಕ ಸೂಚಿಸಿದರು.

6. ಮಳೆಗಾಲದಲ್ಲಿ ಕೆಲವು ಮನೆಗಳಿಗೆ ನೀರು ನುಗ್ಗಿದ್ದು ಅದರ ಪರಿಹಾರಕ್ಕೆ ಸಲ್ಲಿಸಿದ ಮನವಿ ಪತ್ರಗಳು ಮುಂದಿನ ಕ್ರಮ ಏನೆಂದು ಶ್ರೀ.ರಾಜೇಂದ್ರ ರವರು ಸಭೆಯನ್ನು ಕೋರಲಾಗಿ ದಕ್ಷಿಣ ಕಛೇರಿಯಲ್ಲಿ ಕಡತವು ಇದ್ದು ಅದರ ಬಗ್ಗೆ ಮಾಹಿತಿಯನ್ನು ನೀಡಲು ಶ್ರೀ.ಅಣ್ಣಪ್ಪ ಟಿ.ಐ ರವರಿಗೆ ಅಧ್ಯಕ್ಷರು ಸೂಚಿಸಿದರು.

7. Voter ID ಯ ಮನವಿ ಪತ್ರ ಸಲ್ಲಿದವರಿಗೆ ಸ್ವೀಕೃತಿ ನೀಡುತ್ತಿಲ್ಲವೆಂದು ಶ್ರೀ.ರಾಜೇಂದ್ರ ರವರು ಆರೋಪಿಸಿ ಇನ್ನು ಮುಂದೆ ಸ್ವೀಕೃತಿ ಪತ್ರ ನೀಡಲು ಕ್ರಮಕೈಗೊಳ್ಳಬೇಕೆಂದು ಅದರ ಬಗ್ಗೆ ಮಾಹಿತಿಯನ್ನು ನೀಡಲು ಶ್ರೀ.ಅಣ್ಣಪ್ಪ ಟಿ.ಐ ರವರಿಗೆ ಅಧ್ಯಕ್ಷರು ಸೂಚಿಸಿದರು.

8. ಈ ವಾರ್ಡ್‌ನಲ್ಲಿ ಕಸ ಸಾಗಿಸುವ ಕಾಮಗಾರಿಯು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಶ್ರೀ.ರಾಜೇಂದ್ರ ರವರು ಆರೋಪಿಸಿ ಶ್ರೀಮತಿ. ಸೀಮಾ ಆರ್. ಕಿ.ಆ.ಪ ರವರು ಕೆಳಗಿನಂತೆ ವಿವರಣೆ ನೀಡಿರುತ್ತಾರೆ.- ವಾರ್ಡ್‌ನಲ್ಲಿ 16 Auto ಗಳು ಕಾರ್ಯನಿರ್ವಹಿಸುತ್ತಿದ್ದು ಪ್ರತಿಯೊಂದು ರಸ್ತೆಗೂ ಸಹ Auto ಗಳು ಸಂಚರಿಸುತ್ತಿದ್ದು ಅಂತರ್ಜಾಲದಲ್ಲಿ ನಮೂದಾಗಿರುತ್ತದೆ ಹಾಗೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ವಿಶೇಷವಾಗಿ ರಸ್ತೆಯ ಹೆಸರನ್ನು ಸೂಚಿಸಿದಲ್ಲಿ ಗಮನ ಹರಿಸುವುದಾಗಿ ಸಭೆಗೆ ತಿಳಿಸಿದರು.

9. ಈ ಪಾಕ್ಷಿಕದಲ್ಲಿ ರೂ: 5.00 ಲಕ್ಷಗಳಷ್ಟು ತೆರಿಗೆ ಮೂಲಕ ಸಂಗ್ರಹಿಸಲಾಗಿದೆ ಎಂದು ತೆರಿಗೆ ಪರಿವೀಕ್ಷಕರು ಸಭೆಗೆ ತಿಳಿಸಿದರು.

10. ಶಾಮಣ್ಣ ಗಾರ್ಡ್‌ನ್ 3ನೇ ಮುಖ್ಯರಸ್ತೆಯಲ್ಲಿ ಚರಂಡಿ ಕಾಮಗಾರಿಯು ನಡೆಯುತ್ತಿದ್ದು ಅತಿ ಶೀಘ್ರದಲ್ಲಿ ಮುಗಿಸಿಕೊಡಬೇಕೆಂದು ಶ್ರೀನಿವಾಸ್.ಮೂರ್ತಿ ರವರು ಕೋರಿ ಅಧ್ಯಕ್ಷರು ಅತಿ ಶೀಘ್ರವಾಗಿ ಕಾಮಗಾರಿಯನ್ನು ಮುಗಿಸಿಕೊಡಲು ಕೆಲಸ ಪರಿವೀಕ್ಷಕರಿಗೆ ಸೂಚಿಸಿದರು. ಮುಂದುವರೆದು MM Bakery ವೃತ್ತದಲ್ಲಿ Wet Mix ಹಾಕಿದ್ದು ಅತಿ ಶೀಘ್ರವಾಗಿ Asphalt ಹಾಕಿಸಿಕೊಡಲು ತಿಳಿಸಿದರು, ಗೀತಾಶ್ರಮ ರಸ್ತೆ, ಚೌಡಪ್ಪ ಬಡಾವಣೆಯ ರಸ್ತೆಗಳಿಗೆ Pothole ಗಳನ್ನು ಮುಚ್ಚಿಕೊಡಬೇಕೆಂದು ಶ್ರೀನಿವಾಸ್.ಮೂರ್ತಿ ರವರು ಕೋರಿದರು ಈ ವಾರದಲ್ಲಿ ಮಾಡಿಸಿಕೊಳ್ಳುವುದಾಗಿ ಕೆ.ಪ ರವರು ತಿಳಿಸಿದರು.

11. ವಾರ್ಡ್ ರಸ್ತೆಗಳಲ್ಲಿ ಕಸವನ್ನು ಎಸೆಯುತ್ತಿರುವ ಸಮಯದಲ್ಲಿ ಅವರಿಗೆ ದಂಡ ವಸೂಲಿಮಾಡಲು ಹೋದಾಗ ನಮ್ಮೊಂದಿಗೆ ರಕ್ಷಣೆಗಾಗಿ ಆರಕ್ಷರನ್ನು ಕಳುಹಿಸಬೇಕೆಂದು ಶ್ರೀಮತಿ.ಸೀಮಾ. ಜೆ.ಎಚ್.ಐ ರವರು ಸಭೆಯಲ್ಲಿ ಅಧ್ಯಕ್ಷರನ್ನು ಕೋರಿದರು.

12. ಸಾರ್ವಜನಿಕರಿಂದ ಕೆಳಕಂಡ ಸ್ಥಳಗಳಲ್ಲಿ, ವಿದ್ಯುತ್ ದೀಪಗಳು ಬರುತ್ತಿಲ್ಲವೆಂದು ದೂರವಾಣಿ ಮೂಲಕ ಕಾರ್ಯ ನಿರೀಕ್ಷರಿಗೆ ತಿಳಿಸಿದರು Street Light Agency ಗೆ ದೂರವಾಣಿ ಮುಖೇನ ತಿಳಿಸಿ ಸಮಸ್ಯೆ ಬಗೆಹರಿಸಲಾಗಿದೆ. ಪೈಪ್ ಲೈನ್ ರಸ್ತೆ, ಟಿಪ್ಪು ಮಸಿದಿ ಬಳಿ.

13. CC Camera ಗಳ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಿದ್ದು ಪೋಲಿಸ್ ಇಲಾಖೆಯವರು ಮಾಹಿತಿ ನೀಡಲು ತಿಳಿಸಲಾಯಿತು.

14. ನೆಹರು ರಸ್ತೆಯ 4ನೇ ಕ್ರಾಸ್ ಬಳಿ ಉಪ ನೀರುಗಾಲುವೆಯಲ್ಲಿ BWSSB ರವರು Sub Line ವಿಭಾಗದವರು Man hole ನಿರ್ಮಿಸಿ ಪೈಪ್ ಲೈನ್ ಸಹ ಅಳವಡಿಸಿ ಅದರ ಮೇಲೆ Concrete ಹಾಕಿರುತ್ತಾರೆ ಇದರಿಂದ ನೀರು ಹರಿಯಲು ತೊಂದರೆಯಾಗಿ ಕೆಲಸ ಪರಿವೀಕ್ಷಕರು BWSSB AEE ಹಾಗೂ SWD AE ರವರಿಗೆ ದೂರವಾಣಿಯ ಮೂಲಕ ತಿಳಿಸಿ ತೆರವುಗೊಳಿಸಿಕೊಡಬೇಕೆಂದು ಕೋರಿ ಕ್ರಮ ಕೈಗೊಳ್ಳುವುದಾಗಿ BWSSB AEE ಹಾಗೂ SWD AE ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಈ ಸಭೆಯಲ್ಲಿ ಚರ್ಚಿಸಿರುವ ಸಮಸ್ಯೆಗಳನ್ನು ಬಗೆಹರಿಸಿ ಪಾಲನಾ–ವರದಿ ಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ಯವರು ತಿಳಿಸಿದರು.

ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 06.12.2021

R Sangeeta

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134